Technical and non-Technical Posts

947 SRI K. LAKSHMAN (Gandhinagar)—Will the Minister for Finance be pleased to state.—

(a) whether the Government order No. FD. 27 SRC (1) 74, dated 20th November, 1974 is applicable to both the technical and non-technical staff,

(b) if so, whether it has come to the notice of the Government that though they are qualified for certain posts of second division technical cadre, (equivalent to second division clerks posts) they were not given the benefit of the said Government Order ?

SRI S.M. YAHYA (Minister for Finance).—

(a) Yes,

(b) No.

ಶ್ರೀ ಕೆ. ಲಕ್ಷ್ಮಣ್.—ಮಾನ್ಯ ಅಧ್ಯಕ್ಷರೇ, ತಾಂತ್ರಿಕ ಶ್ರೇಣಿಯ ಎರಡನೇ ದರ್ಜೆಯ ಕೆಲವು (ಎರಡನೇ ದರ್ಜೆಯ ಗುಮಾಸ್ತರ ಹುದ್ದೆಗಳಿಗೆ ಸಮವಾದ ಹುದ್ದೆಗಳು) ಅವರು ಎಲ್ಲ ಅರ್ಹತೆಗಳನ್ನು ಪಡೆದಿದ್ದರೂ ಕೂಡ ಅವರಿಗೆ ಈ ಸರ್ಕಾರಿ ಆಜ್ಞೆಯು ಲಾಭವನ್ನು ಕೊಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂಬ ನನ್ನ ಪ್ರಶ್ನೆಗೆ ಮಾನ್ಯ ಸಚಿವರು 'ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ಹಾಸನ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಸರ್ಕಾರಿ ಆಜ್ಞೆ ಪ್ರಕಾರ ಅದರ ಲಾಭವನ್ನು ಕೊಡಲಿಲ್ಲ ಎಂಬುದು ಸಚಿವರ ಗಮನಕ್ಕೆ ಬಂದಿಲ್ಲ ಎಂದು ಕಾಣುತ್ತದೆ. ದಯವಿಟ್ಟು ಮಾನ್ಯ ಮಂತ್ರಿಗಳು ಇದನ್ನು ಸರಿಪಡಿಸುತ್ತಾರೆಯೇ ?

ಶ್ರೀ ಎಸ್. ಎಂ. ಯಾಹ್ಯಾ.—ನಿನ್ನೆಯ ಈ ಸರ್ಕಾರಿ ಆಜ್ಞೆ ಏನೆಲ್ಲರಿಗೂ ಅನ್ವಯವಾಗುತ್ತದೆ. ನಮಗೆ ತಿಳಿದೆಹಾಗೆ ಇದರ ಲಾಭವನ್ನು ಪಡೆಯದಿರುವ ನಿರ್ದಿಷ್ಟ ಪ್ರಕರಣಗಳು ಸಿಕ್ಕಿಲ್ಲಿ. ಟೆಕ್ನಿಕಲ್ ಎಜುಕೇಷನ್ ಇಲಾಖೆಯಲ್ಲಿ ೨ ವರ್ಷದ ಹಿಂದೆ ಎರಡು ಮೂರು ಕೇಸುಸ್ ಬಂದಿತ್ತು. ಅದನ್ನು ಸರಿ ಮಾಡಿ ಕೊಟ್ಟಿದ್ದೇವೆ. ಅದನ್ನು ಬಿಟ್ಟರೆ ಇನ್ನು ಬೇರೆ ಯಾವುದೂ ನನ್ನ ಗಮನಕ್ಕೆ ಬಂದಿಲ್ಲ. ಅಂಥದ್ದೆನಾದರೂ ಇದ್ದರೆ ಅದನ್ನು ತಿಳಿಸಿದರೆ ಸರಿ ಮಾಡಿಕೊಡುತ್ತೇವೆ.

Bridges and Causeways in Bhadra Achkat area

541 SMT C. NAGAMMA KESHAVA MURTHY (Mayakonda)—Will the Chief Minister be pleased to state —

(a) the No. of bridges and causeways to be taken up for construction in the Bhadra achkat area,

(b) whether it has come to the notice of Government that the bridges near Kanagondanahally and Shyagalle villages have been washed away rendering many villages without proper communications

(c) if so, when will they be taken up and completed ?

SRI D. DEVARAJ URS (Chief Minister) -

(a) Bridges ... 2 nos,
Causeways ... 3 Nos.

(b) Yes.

(c) Estimates are under finalisation and works will be taken up after sanctions to the estimates.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಉತ್ತರದಲ್ಲಿ ಎರಡು ಸೇತುವೆಗಳು ಮೂರು ಒಡ್ಡುದಾರಿಗಳು ಎಂದು ಹೇಳಿದ್ದಾರೆ, ಎರಡು ಸೇತುವೆಗಳು ಎಲ್ಲಿ ಇದೆ, ಯಾವ ತಾಲ್ಲೂಕಿನಲ್ಲಿವೆ ಮತ್ತು ಒಡ್ಡುದಾರಿಗಳು ಎಲ್ಲಿವೆ ಎಂಬುದನ್ನು ದಯವಿಟ್ಟು ತಿಳಿಸುತ್ತಾರೆಯೆ ?

† ಶ್ರೀ ಡಿ. ದೇವರಾಜ್ ಅರಸ್.—ನಿಮಗೆ ಗೊತ್ತಿಲ್ಲದೇ ಪ್ರಶ್ನೆಯನ್ನು ಕೇಳಿದ್ದೀರಾ? ಸೇತುವೆ ಕೆಲಸ ತೆಗೆದುಕೊಂಡಿರುವುದು ಕುಶಿ ಹಳ್ಳ ಗಂಜೀಗೆರೆ ಭದ್ರಾ ಆಯಕಟ್ ರೋಡ್, ಮತ್ತೇ ೬೪ನೇ ಮೈಲಿಗಲ್ಲಿನ ಹತ್ತಿರ ಅಂದರೆ ದಾವಣಗೆರೆ ಸಂತೇಬೆನ್ನೂರು ರೋಡ್, ಆಮೇಲೆ ಶ್ಯಾಗಲೇ ಹಳ್ಳಿ ಹತ್ತಿರ ೨.೭ ಲಕ್ಷ ರೂಪಾಯಿ ವೆಚ್ಚದಲ್ಲಿ ಎರಡು ಸೇತುವೆಗಳನ್ನು ಮಾಡಬೇಕೆಂದಿರುವುದು ಈಗ ಇತ್ತೀಚೆಗೆ ಕುಶಿ ಹಳ್ಳ ಸೇತುವೆ ನಿರ್ಮಾಣ ಕಾರ್ಯ ತೆಗೆದುಕೊಂಡಿದೆ. ಏಜನ್ಸಿ ಫಿಕ್ಸ್ ಆಗಿದೆ. ಮತ್ತೆ ಒಡ್ಡುದಾರಿಗಳನ್ನು ತೊಡುವುದಕ್ಕೆ ತೆಗೆದುಕೊಂಡಿರುವುದು ಭಾರೇಹಳ್ಳ ಮತ್ತು ಕೆ.ಬಿ. ಹಳ್ಳದ ಹತ್ತಿರ. ಹೈಲೆವೆಲ್ ಕಾಸ್‌ವೇ ಶಿವಮೊಗ್ಗಾಯಿಂದ ಬಿಸಿಲೇರಿ ರಸ್ತೆ—ಮತ್ತು ಐ.ಟಿ. ರೋಡ್, ಬೂದಿಹಾಳ್ ವಿಲೇಜಿಗೆ ಹೋಗುವ ದಾರಿಯಲ್ಲಿ ತೆಗೆದುಕೊಂಡಿದೆ. ಸರ್ಕಾರ ೨ ಸೇತುವೆಗಳನ್ನು ಮತ್ತು ೩ ಒಡ್ಡುದಾರಿಗಳನ್ನು ಮಾಡುವುದಕ್ಕೆ ಏರ್ಪಾಡು ಮಾಡುತ್ತಿದೆ. ಇನ್ನೊಂದು ಎಸ್ಟಿಮೇಟ್ ತಯಾರಾಗುತ್ತಿದೆ. ಅದು ಇಷ್ಟರಲ್ಲೇ ಸರ್ಕಾರದ ಮುಂದೆ ಅಪ್ರೂವಲ್‌ಗೆ ಬರುತ್ತದೆ. ಆಮೇಲೆ ಕನಗೊಂಡನಹಳ್ಳಿ—ಶ್ಯಾಗಲೇ ವಿಲೇಜ್ ಇಲ್ಲಿ ಕಮ್ಯುನಿಕೇಷನ್ ಬಿಲ್ಡಿಂಗ್ಸ್ ಡಿವಿಷನ್‌ನವರು ಸೆಪ್ಟೆಂಬರ್ ೧೯೭೮ರಲ್ಲಿ ಕೆಲಸ ತೆಗೆದುಕೊಂಡಿದ್ದಾರೆ. ಸದ್ಯಕ್ಕೆ ರಿಪೇರಿ ಮಾಡುವುದಕ್ಕೆ ತಾತ್ಕಾಲಿಕ ಕ್ರಮ ತೆಗೆದುಕೊಳ್ಳುತ್ತೇವೆ,

ಶ್ರೀಮತಿ ಸಿ ನಾಗಮ್ಮ ಕೇಶವಮೂರ್ತಿ,—ಕನಗೊಂಡನಹಳ್ಳಿ ಶ್ಯಾಗಲೇ ಹಳ್ಳಿಗಳ ಹತ್ತಿರ ಇರತಕ್ಕ ಎರಡು ಸೇತುವೆಗಳನ್ನು ಯಾವಾಗ ಕಟ್ಟುವುದಕ್ಕೆ ಪ್ರಾರಂಭ ಮಾಡಿದರು ಎಷ್ಟು ಖರ್ಚು ಮಾಡಿದ್ದಾರೆ ಮತ್ತು ೫-೬ ವರ್ಷದಲ್ಲಿ ಬರೀ ರಿಪೇರಿಗಳಿಗೇ ಸರ್ಕಾರ ಎಷ್ಟು ಹಣ ಖರ್ಚು ಮಾಡಿದೆ ? ರಿಪೇರಿಗಳಿಗೆ ಸರ್ಕಾರ ಮಾಡಿರುವ ಖರ್ಚನ್ನು ನೋಡಿದರೆ ಹೊಸ ಸೇತುವೆಯನ್ನು ನಿರ್ಮಾಣ ಮಾಡಬಹುದಾಗಿತ್ತು ಎನ್ನಿಸುತ್ತದೆ. ಆದ್ದರಿಂದ ರಿಪೇರಿ ಬದಲು ಹೊಸಸೇತುವೆಗಳನ್ನು ಮಾಡುವುದಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಟಿಕ್ಷಿಕಲ್ಲಾಗಿ ಹೊಸ ಸೇತುವೆಗಳನ್ನು ಕಟ್ಟುವುದೇ ಉತ್ತಮ ಎಂದು ಕಂಡುಬಂದರೆ ಅದನ್ನೇ ಮಾಡೋಣ. ಈಗ ರಿಪೇರಿ ಮಾಡಬೇಕೆಂದಿದ್ದೇವೆ. ಎರಡನ್ನೂ ಯೋಚನೆ ಮಾಡಿ ಮಾಡೋಣ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಎರಡು ಸೇತುವೆಗಳು ಒಂದೊಂದು ಲಕ್ಷ ರೂಪಾಯಿ ವೆಚ್ಚದಲ್ಲಿ ಆಗಿತ್ತು. ಈಗ ರಿಪೇರಿಗೆ ಒಂದೊಂದು ಸೇತುವೆಗೆ ಎರಡು ಮೂರು ಸಲ ರಿಪೇರಿ ಮಾಡುವುದಕ್ಕೆ ೭೫ಸಾವಿರ ರೂಪಾಯಿ ಖರ್ಚಾಗಿದೆ. ಆದ್ದರಿಂದ ಮತ್ತೆ ಮತ್ತೆ ರಿಪೇರಿ ಕೆಲಸ ಕೈಗೊಳ್ಳುವ ಬದಲು ಹೊಸ ಸೇತುವೆ ಕಾರ್ಯವನ್ನೇ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಇಂಜಿನಿಯರ್ ಅವರನ್ನು ಕೇಳಿ ಮಾಡುತ್ತೇವೆ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಈ ಎರಡು ಸೇತುವೆಗಳನ್ನು ೧೯೭೯-೮೦ರಲ್ಲೇ ಸ್ಯಾಂಕ್ಷನ್ ಮಾಡಿ ಕಾರ್ಯ ಕೈಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ನಿಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.